## ನಾಲ್ಕು ಸಾವು

ಗಣಿತ ಶಿಕ್ಷಕಿ ರಮೇಶನಿಗೆ ಒಂದರಿಂದ ಹತ್ತರವರೆಗೆ ಸಂಖ್ಯೆ ಹೇಳಲು ಹೇಳಿದರು. ರಮೇಶ 1, ,2, 3, 5, 6 ,7 ,8 ,9 ,10 ಎಂದು ಹೇಳಿ ಮುಗಿಸಿದ. ಶಿಕ್ಷಕಿ, 'ನಾಲ್ಕು ಎಲ್ಲೋ? ಹಾರಿಸಿ ಬಿಟ್ಯಲ್ಲ?' ಎಂದರು. ರಮೇಶ, 'ನಾಲ್ಕು ಸತ್ತೋಗಿದೆ ಟೀಚರ್' ಎಂದ ಗಂಭೀರವಾಗಿ. 'ನಾಲ್ಕು ಸತ್ತೋಗಿದೆಯಾ? ಯಾರೋ ಹೇಳಿದ್ದು?' ಎಂದರು ಆಶ್ಚರ್ಯದಿಂದ. ರಮೇಶ ಹೇಳಿದ, 'ನೀವು ಪೇಪರ್ ಓದಲ್ವಾ ಟೀಚರ್, ನಿನ್ನೆ ಪೇಪರ್ ಅಲ್ಲಿ ಬಂತಲ್ಲ, ರಸ್ತೆ ಅಪಘಾತದಲ್ಲಿ ನಾಲ್ಕು ಸಾವು ಅಂತ...' ಎಂದ. ಶಿಕ್ಷಕಿ ಸುಸ್ತು.

**ಅನುಪಮಾ ವಸ್ತದ್**





## ಒಳ್ಳೆ ಐಡಿಯಾ

ನಡುರಾತ್ರಿ ಒಬ್ಬ ಹುಡುಗಿ ಒಂಟಿಯಾಗಿ ನಡೆದು ಹೋಗುತ್ತಿದ್ದಳು. ಅವಳು ಒಂಟಿಯಾಗಿ ಹೋಗುವುದನ್ನು ನೋಡಿದ ಇಬ್ಬರು ಪುಂಡ ಹುಡುಗರು ಅವಳನ್ನು ಕಿಚಾಯಿಸಬೇಕೆಂದು ಹಿಂದೆ ಹಿಂದೆ ಹೋದರು. ಅವಳು ಯಾವ ಅಂಜಿಕೆಯೂ ಇಲ್ಲದೆ ಹೋಗುವುದನ್ನು ಕಂಡು, 'ಏ ಹುಡುಗಿ, ಇಷ್ಟು ರಾತ್ರಿಯಲ್ಲಿ ಒಬ್ಬಳೇ ಹೊರಟಿರುವಿ? ನಾವು ಹಿಂದೆ ಬರುತ್ತಿದ್ದರೂ ನಿನಗೆ ಭಯ ಇಲ್ಲವೆ?' ಎಂದು ಕೇಳಿದರು. ಆಕೆ ಒಂದಿನಿತೂ ಗಾಬರಿಯಾಗದೆ ನಗುಗುತ್ತಲೇ, 'ಇಲ್ಲ ಮಿಸ್ಟರ್... ನಾನು ಬದುಕಿದ್ದಾಗ ಎಲ್ಲದಕ್ಕೂ ಹೆದರುತ್ತಿದ್ದೆ... ಈಗ ಯಾಕೆ ಹೆದರಬೇಕು ಹೇಳಿ...' ಎಂದು ಹೇಳಿ ಮುಗಿಸುವಷ್ಟರಲ್ಲಿ ಆ ಹುಡುಗರು ಅಲ್ಲಿಂದ ಹೇಳ ಹೆಸರಿಲ್ಲದೇ ಮಂಗ ಮಾಯ!

ಕಲೆ: ಗಣೇಶ ಆಚಾರ್ಯ

**ಅರವಿಂದ ಜಿ. ಜೋಷಿ**